ಕನ್ನಡಪ್ರಭ

Friday 9th September 2022, Page No.03

**Increase in demand for electric vehicles: Certificate distribution of various training courses at RV College**

# ವಿದ್ಯುತ್ ವಾಹನಗಳ ಬೇಡಿಕೆ ಹೆಚ್ಚಳ: ರಾಜೀವ್

## ಆರ್‌ವಿ ಕಾಲೇಜಿನಲ್ಲಿ ವಿವಿಧ ತರಬೇತಿ ಕೋರ್ಸ್ ಪ್ರಮಾಣ ಪತ್ರ ವಿತರಣೆ



ಆರ್‌ವಿ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿದ್ಯುತ್ ವಾಹನ ಕುರಿತ ನೂತನ ತರಬೇತಿ ಕೋರ್ಸ್‌ನ ಒಡಂಬಡಿಕೆ ಪತ್ರಕ್ಕೆ ಎಂಜಿ ಮೋಟಾರ್ ಇಂಡಿಯಾದ ಅಧ್ಯಕ್ಷ ರಾಜೀವ್ ಚಾಬಾ ಮತ್ತು ಆರ್‌ವಿ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ। ಕೆ.ಎನ್.ಸುಬ್ರಹ್ಮಣ್ಯ ಸಹಿ ಹಾಕಿದರು.

• **ಕನ್ನಡಪ್ರಭ ವಾರ್ತೆ** ಕೆಂಗೇರಿ

ಮುಂದಿನ ಮೂರ್ನಾಲ್ಕು ವರ್ಷಗಳಲ್ಲಿ ವಿದ್ಯುತ್ ವಾಹನ ಬಳಸುವವರ ಸಂಖ್ಯೆ ಶೇಕಡ 70ರಷ್ಟು ಏರಿಕೆಯಾಗಲಿದೆ ಎಂದು ಎಂಜಿ ಮೋಟಾರ್ ಇಂಡಿಯಾದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ರಾಜೀವ್ ಚಾಬಾ ತಿಳಿಸಿದರು.

ನಗರದ ಆರ್‌ವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 90 ದಿನಗಳ ಇಂಟರ್ನ್‌ಶಿಪ್ ಹಾಗೂ ವಿವಿಧ ತರಬೇತಿ ಕೋರ್ಸ್ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮ ಉದ್ಘಾಟನೆ ಮಾತನಾಡಿದ ಅವರು, ಪ್ರಸ್ತುತ ದಿನಗಳಲ್ಲಿ ವಿದ್ಯುತ್ ವಾಹನಗಳ ಬೇಡಿಕೆ ಹೆಚ್ಚಳವಾಗುತ್ತಿದ್ದು, ಮುಂದಿನ ದಿನಗಳಲ್ಲಿ ಬಹುತೇಕರು ವಿದ್ಯುತ್ ವಾಹನ ಅವಲಂಬಿಸಲಿದ್ದಾರೆ. 3-4 ವರ್ಷದಲ್ಲಿಯೇ ಬಳಸುವವರ ಸಂಖ್ಯೆ ಶೇ.70ರಷ್ಟು ಏರಿಕೆಯಾಗಲಿದೆ ಎಂದರು.

ಉದ್ಯಮ-ಶಿಕ್ಷಣ ಕ್ಷೇತ್ರದ ಅಂತರವನ್ನು ತಗ್ಗಿಸಲು ಮತ್ತು ವಿದ್ಯಾರ್ಥಿಗಳನ್ನು ಸಶಕ್ತಗೊಳಿಸಲು ವಿಶೇಷ ಸುಧಾರಿತ ಡಿಪ್ಲೊಮಾ ಕೋರ್ಸನ್ನು ಕರ್ನಾಟಕದಲ್ಲಿ ಆರ್. ವಿ. ಕಾಲೇಜ್ ಆಫ್ ಎಂಜಿನಿಯರಿಂಗ್ ಎಂಜಿ ಕಂಪನಿಯೊಂದಿಗೆ ಆರಂಭಿಸಲಾಗಿದೆ ಎಂದು ಮಾಹಿತಿ ನೀಡಿದರು. ಇದೇ ವೇಳೆ ವಿದ್ಯುತ್ ವಾಹನ ಕುರಿತ ನೂತನ ತರಬೇತಿ ಕೋರ್ಸ್‌ನ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಲಾಯಿತು.

ಆರ್‌ವಿ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ। ಕೆ.ಎನ್.ಸುಬ್ರಹ್ಮಣ್ಯ, ಆರ್.ಎಸ್.ಎಸ್.ಟಿ ಅಧ್ಯಕ್ಷ ಡಾ। ಎಂ.ಪಿ.ಶ್ಯಾಮ್, ಕಾರ್ಯದರ್ಶಿ ಡಾ। ಎ.ವಿ.ಎಸ್.ಮೂರ್ತಿ, ಜಂಟಿ ಕಾರ್ಯದರ್ಶಿ ಡಿ.ಪಿ.ನಾಗರಾಜ್, ಉಪ ಪ್ರಾಂಶುಪಾಲೆ ಡಾ। ಕೆ. ಎಸ್.ಗೀತಾ, ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ। ಕೃಷ್ಣ, ಡಾ। ಶಾಂತಾ, ಡಾ। ಗುಪ್ತಾ ಉಪಸ್ಥಿತರಿದ್ದರು.

ಕನ್ನಡಪ್ರಭ Thu, 08 September 2022
https://kpepaper.asianetnews.com/c/70041069